# ಮರೆಯಲಾದೀತೇ ಈ ಜ್ಞಾನದೇಗುಲವ..!



ಸೇವೆಯಲ್ಲೂ ಓದಿನಲ್ಲೂ ಮುಂದಾದ ವಿದ್ಯಾರ್ಥಿಗಳನ್ನು ಅಭಿನಂದಿಸಲು ಹಮ್ಮಿಕೊಂಡಿದ್ದ ಸರಳ ಸಮಾರಂಭದಲ್ಲಿ 'ಇದು ಕೇವಲ ಕುಡುಮಿಗಳ ಕಾಲೇಜಲ್ಲ' ಎಂದು ಡಾ.ಎಚ್ಚೆನ್ ಸಮರ್ಥಿಸಿ ಕೊಂಡಿದ್ದರಲ್ಲಿ ಯಾವ ಅತಿಶಯೋಕ್ತಿಯೂ ಇರಲಿಲ್ಲ.

■ **ಮಂಜುನಾಥ ಡಿ.ಎಸ್.**

ಹದಿಹರೆಯ ಭವಿಷ್ಯದ ಬುನಾದಿ ಭದ್ರಪಡಿಸುವ ಪ್ರಮುಖ ಘಟ್ಟ. ಜೀವನದ ಈ ನಿರ್ಣಾಯಕ ಸಮಯದಲ್ಲಿ 1967ರಿಂದ 1971ರ ತನಕ ಬೆಂಗಳೂರಿನ ಬಸವನಗುಡಿಯಲ್ಲಿರುವ ನ್ಯಾಷನಲ್ ಕಾಲೇಜಿನಲ್ಲಿ ಕಲಿಯುವ ಅವಕಾಶ ದೊರಕಿದ್ದು ನನ್ನ ಸೌಭಾಗ್ಯ. ಪ್ರತಿ ದಿನ ಕಾಲೇಜು ಪ್ರವೇಶಿಸುವಾಗ ಮುಖ್ಯ ದ್ವಾರದಲ್ಲಿ ಎದ್ದು ಕಾಣುತ್ತಿದ್ದ 'ಶ್ರದ್ಧಾ ಹಿ ಪರಮಾಗತಿಃ' ಎಂಬ ಧ್ಯೇಯವಾಕ್ಯ ಸಹಜವಾಗಿಯೇ ಮನದಾಳದಲ್ಲಿ ಬೇರೂರಿತು.

ವಿದ್ಯಾರ್ಥಿಗಳ ಕಲಿಕೆಗೆ ಶ್ರದ್ಧೆಯಿಂದ ಶ್ರಮಿಸಿದ ಅನೇಕ ಪ್ರಾಧ್ಯಾಪಕರು ಈ ಧ್ಯೇಯವಾಕ್ಯದ ಪರಿಪಾಲಕರೆಂದರೆ ತಪ್ಪಾಗಲಾರದು. ಪ್ರಿನ್ಸಿಪಾಲರಾಗಿದ್ದು ಭೌತಶಾಸ್ತ್ರ ಬೋಧಿಸಿದ ಎಚ್.ನರಸಿಂಹಯ್ಯನವರಿಂದ ಮೊದಲ್ಗೊಂಡು ಕೆ.ಆರ್., ಎಮ್.ಎಸ್.ವಿ, ಎ.ಎಲ್.ಎನ್., ಬಿ.ಕೆ., ಸಿ.ವಿ.ವಿ., ಕೆ.ಡಿ.ಎನ್., ಸುಂದರ ರಾಜನ್, ಎಮ್.ಎನ್.ಗುಡಿ, ಎ.ಎಚ್.ಆರ್., ಮುಂತಾದ ಹಲವಾರು ಗುರುಗಳು ಕಾಲೇಜಿನ ಅವಧಿಯ ನಂತರವೂ ತಮ್ಮ ಅಮೂಲ್ಯ ಸಮಯವನ್ನು ನಮಗಾಗಿ ಮುಡುಪಿಟ್ಟಿದ್ದೇ ಇದಕ್ಕೆ ಪುರಾವೆ. ಜ್ಞಾನ ದಾಸೋಹ ಸಾಲದೆಂಬಂತೆ ಬರ್ಫಿ ಬಾದಾಮಿ ಹಾಲಿನ ದಾಸೋಹವನ್ನೂ ಇವರು ನಡೆಸಿಕೊಂಡು ಬಂದಿದ್ದರು!

ಇವರ ಮಾರ್ಗದರ್ಶನ ಕೇವಲ ಪಠ್ಯಕ್ಕಷ್ಟೇ ಸೀಮಿತವಾಗಿರಲಿಲ್ಲವೆಂಬುದು ವಿಶೇಷ. ಕ್ರೀಡೆ, ನಾಟಕ, ಸಾಹಿತ್ಯ, ಸಂಗೀತ, ಸಿನಿಮಾ, ವಿಮರ್ಶೆ, ಸಮಾಜ ಸೇವೆ, ಭಾಷಣ ಸ್ಪರ್ಧೆ, ಸಾಮಾಜಿಕ ಕಾಳಜಿ.. ಹೀಗೆ ಹಲವಾರು ಆಯಾಮಗಳನ್ನು ಈ ಗುರುಗಳು ನಮಗೆ ಪರಿಚಯಿಸಿ ನಮ್ಮ ದೃಷ್ಟಿಕೋನವನ್ನು ವಿಸ್ತರಿಸಿದರು. ಇದರ ಫಲವಾಗಿ ಇಂದು ಅನೇಕ ವಿದ್ಯಾರ್ಥಿಗಳು ರಾಜ್ಯ, ದೇಶ, ವಿದೇಶಗಳಲ್ಲಿ ತಮ್ಮ ಪ್ರತಿಭೆಯಿಂದ ಪ್ರಖ್ಯಾತರಾಗಿದ್ದಾರೆ; ಕಾಲೇಜಿಗೆ ಹೆಸರು ತಂದಿದ್ದಾರೆ; ಪ್ರಾಧ್ಯಾಪಕರಿಗೆ ಸಂತೃಪ್ತಿ ನೀಡಿದ್ದಾರೆ.

ಎನ್.ಎಸ್.ಎಸ್. ಯೋಜನೆ ಆರಂಭಿಸುವ ಮೂಲಕ ಕಾರ್ಪೊರೇಷನ್ ಶಾಲೆಗಳ ವಿದ್ಯಾರ್ಥಿಗಳಿಗೆ ಪಾಠ ಕಲಿಸಲು ನಮ್ಮನ್ನು ಪ್ರೇರೇಪಿಸಿ, ಸೇವಾ ಶಿಬಿರಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿ, ಸಂತ್ರಸ್ತರಿಗೆ ನೆರವು ನೀಡುವ ಸಂವೇದನಾಶೀಲತೆ ಸೃಜಿಸಿದ ಅನನ್ಯವಾದ ಈ ಕಾಲೇಜನ್ನು ಮತ್ತು ಪ್ರಾಧ್ಯಾಪಕರನ್ನು ಸದಾ ಸ್ಮರಿಸುತ್ತೇನೆ.

ವಿದ್ಯಾರ್ಥಿ ಸಂಘದ ಚುನಾವಣೆಗಳ ಪಾರದರ್ಶಕ ಹಾಗೂ ಅಚ್ಚುಕಟ್ಟಿನ ನಿರ್ವಹಣೆಯ ಮೂಲಕ ಪ್ರಜಾಪ್ರಭುತ್ವದ ನಿಜಸ್ವರೂಪವನ್ನು ನ್ಯಾನೋ ರೂಪದಲ್ಲಿ ಪರಿಚಯಿಸಿದ ಕೀರ್ತಿ ಎಚ್ಚೆನ್ ಮತ್ತು ಅವರ ತಂಡಕ್ಕೆ ಸಲ್ಲುತ್ತದೆ.

ವೈಚಾರಿಕ ಪ್ರಜ್ಞೆ ಕುರಿತಂತೆ ಎಚ್ಚೆನ್ ಜೊತೆ ನಡೆದ ಅನೇಕ ಸಂವಾದ/ಚರ್ಚೆಗಳು ಇಂದಿಗೂ ನೆನಪಿನಲ್ಲಿ ಉಳಿದಿವೆ. 1971ರ ಭಾರತ ಪಾಕಿಸ್ತಾನದ ನಡುವೆ ನಡೆದ ಯುದ್ಧದ ಬಗ್ಗೆ ಯಾರಾದರೂ ಭವಿಷ್ಯ ನುಡಿದಿದ್ದರೆ? ಎಂಬ ಎಚ್ಚೆನ್‌ರ ಪ್ರಶ್ನೆಯೊಂದಿಗೆ ದೈನಿಕವೊಂದರಲ್ಲಿ ಆರಂಭವಾದ ಸಂವಾದ ಅಂತ್ಯಗೊಳ್ಳುವ ತನಕ ಕಾಲೇಜು ಆವರಣದಲ್ಲಿಯೇ ವಾಸಿಸುತ್ತಿದ್ದ ಎಚ್ಚೆನ್‌ರ ಹಾಸ್ಟೆಲ್ ಕೊಠಡಿಯಲ್ಲಿ ಪ್ರತಿದಿನ ಸಂಜೆ ನಡೆಯುತ್ತಿದ್ದ ಬಿಸಿ ಬಿಸಿ ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದುದನ್ನು ಮರೆಯುವುದು ಸಾಧ್ಯವಿಲ್ಲ. ಯಾವುದನ್ನೂ ಪ್ರಶ್ನಿಸದೆ ಒಪ್ಪಿಕೊಳ್ಳಬೇಡಿ ಎಂಬ ಡಾ.ಎಚ್ಚೆನ್‌ರವರ ಸಂದೇಶ ತಲೆಗೆ ಹೊಕ್ಕಿದ್ದು ಸಹ ನ್ಯಾಷನಲ್ ಕಾಲೇಜಿನಲ್ಲಿಯೇ.

ಸೇವೆಯಲ್ಲೂ ಓದಿನಲ್ಲೂ ಮುಂದಾದ ವಿದ್ಯಾರ್ಥಿಗಳನ್ನು ಅಭಿನಂದಿಸಲು ಹಮ್ಮಿಕೊಂಡಿದ್ದ ಸರಳ ಸಮಾರಂಭದಲ್ಲಿ ಇದು ಕೇವಲ ಕುಡುಮಿಗಳ ಕಾಲೇಜಲ್ಲ ಎಂದು ಡಾ.ಎಚ್ಚೆನ್ ಸಮರ್ಥಿಸಿಕೊಂಡಿದ್ದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ.

ಇಂತಹ ವೈವಿಧ್ಯಮಯ, ಆತ್ಮೀಯ ವಾತಾವರಣದಲ್ಲಿ ನಾಲ್ಕು ವರ್ಷಗಳು ಕಳೆದ ನಂತರ ಕಾಲೇಜಿಗೆ ವಿದಾಯ ಹೇಳಬೇಕಾದ ಆ ಭಾವಪೂರ್ಣ ದಿನ ಬಂದೇ ಬಿಟ್ಟಿತು. ಹಲವು ಪ್ರಾಧ್ಯಾಪಕರು ಮತ್ತು ಗೆಳೆಯರೊಡನೆ ಅಂದು ತೆಗೆಸಿಕೊಂಡ ಕಪ್ಪುಬಿಳುಪಿನ ಭಾವಚಿತ್ರಗಳು ಆ ಅವಿಸ್ಮರಣೀಯ ದಿನದ ಸವಿ ನೆನಪನ್ನು ಸದಾ ಹಸಿರಾಗಿರುಸುವಲ್ಲಿ ನೆರವಾಗಿವೆ. ■